ಕ್ರ ಸಂ	ಜಿಲ್ಲೆ	ಒಟ್ಟು	
		ಭೌತಿಕ	ಆರ್ಥಿಕ
18	ಕೊಡಗು	1901 79	2689801
19	ಕೋಲಾರ	16902 89	20457561
20	ಕೊಪ್ಪಳ	11391 58	40365628
21	ಮಂಡ್ಯ	28044 08	25748260
22	ಮೈಸೂರು	25511 74	63009184
23	ರಾಯಚೂರು	18614 53	67791156
24	ಶಿವಮೊಗ್ಗ	24721 00	41243459
25	ತುಮಕೂರು	41094 12	41058924
26	ಉಡುಪಿ	1766 71	1767572
27	ಉತ್ತರ ಕನ್ನಡ	5604 27	14439858
ಮಹಾಮೊತ್ತ		431300 19	983475574

128 (259) ಶ್ರೀ ಕುಮಾರ್ ಬಂಗಾರಪ್ಪ ಎಸ್ (ಸೊರಬ) ಮಾನ್ಯ ಆಹಾರ ಹಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಹಳದಿ ಪಡಿತರ ಚೀಟಿಯನ್ನು ವಿತರಿಸಲು ಇಲಾಖೆಯಲ್ಲಿ ಗೊಂದಲವಿರುವುದು ನಿಜವೇ ,

ಆ) ರಾಜ್ಯದಲ್ಲಿ ಹಳದಿ ಪಡಿತರ ಚೀಟಿಗಳ ಗರಿಷ್ಟ ಪ್ರಮಾಣವೆಷ್ಟು ಹಾಗೂ ಆ ವೈಕಿ ವಿತರಿಸಲಾಗುವುದೆಷ್ಟು ,

ಇ) ವಿತರಿಸಲು ಕಾಲಾವಧಿ ನಿಗಧಿಪಡಿಸಲಾಗಿದೆ ?

ಶ್ರೀ ಗೋವಿಂದಪ್ಪ ಎಂ ಕಾರಜೋಳ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಇಲ್ಲ

ಆ) ರಾಜ್ಯದಲ್ಲಿ ಹಳದಿ ಪಡಿತರ ಚೀಟಿಗಳಿಗೆ ಗರಿಷ್ಟ ಪ್ರಮಾಣ ನಿಗದಿ ಮಾಡಿರುವುದಿಲ್ಲ ರಾಜ್ಯದಾದ್ಯಂತ ವಿತರಿಸಲಾದ ವರ್ಗವಾರು ತಾತ್ಕಾಲಿಕ ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ

ಪಡಿತರ ಚೀಟಿ ವಿಧ	ವಿತರಿಸಿರುವ ಪಡಿತರ ಚೀಟಿಗಳ ಸಂಖ್ಯೆ
ಅನ್ನಪೂರ್ಣ	25452
ಎಎವೈ	1175959
ಅಕ್ಷಯ	5385258

ಇ) ಮೇಲಿನಂತೆ ವಿತರಿಸಿರುವುದರಿಂದ ಅನ್ವಯಿಸಿರುವುದಿಲ್ಲ

129 (439) ಶ್ರೀ ಕ್ಯಾಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿಯ ಬಡವನ ಹಳ್ಳಿಯ ಸುತ್ತಮುತ್ತಲ ಗ್ರಾಮಗಳಲ್ಲಿ ಹೂವು, ಹಣ್ಣು ಮತ್ತು ತರಕಾರಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ ಇವುಗಳನ್ನು ಮಾರಾಟ ಮಾಡಲು ರೈತರಿಗೆ ಮಾರುಕಟ್ಟೆ ಕಲ್ಪಿಸಲಾಗಿದೆಯೇ ,

ಇ) ಬಡವನಹಳ್ಳಿ ಸುತ್ತಮುತ್ತಲ ಜಾಗದ ರೈತರು ಬೆಳೆದ ಹೂವು, ಹಣ್ಣು ಮತ್ತು ತರಕಾರಿ ಬೆಳೆಗಳು ಹಾಳಾಗಿ ಹೋಗದಂತೆ ಸಂರಕ್ಷಿಸಲು ಕೋಲ್ಡ್ ಸ್ಟೋರೇಜ್ ಸ್ಥಾಪನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ,

ಈ) ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ವಿವರ ನೀಡುವುದು ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ (ತೋಟಗಾರಿಕೆ ಸಚಿವರು):

ಅ) ಹೌದು

ಆ) ಬಡವನಹಳ್ಳಿ ಪ್ರದೇಶದಲ್ಲಿ ಹೂಗಳನ್ನು ಹೆಚ್ಚಾಗಿ ಬೆಳೆಯುತ್ತಿರುವ ಕಾರಣ ಈ ಭಾಗದ ಹೂಗಳ ಮಾರಾಟಕ್ಕಾಗಿ ಬಡವನಹಳ್ಳಿಯಲ್ಲಿ ಒಂದು ಚಿಕ್ಕ ಪ್ರಮಾಣದ ಸಗಟು ಮಾರುಕಟ್ಟೆ ಇರುತ್ತದೆ ಸದರಿ ಮಾರುಕಟ್ಟೆಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳು ಸಾಕಷ್ಟು ಇಲ್ಲದ ಕಾರಣ APMC ವತಿಯಿಂದ ಒಂದು ಹೊಸ ಸಗಟು ಮಾರುಕಟ್ಟೆಯನ್ನು ನಿರ್ಮಿಸಲಾಗಿದೆ

ಇ) ಹೌದು